ರಾಜ್ಯದ ಗ್ರಾಮೀಣ ಪ್ರದೇಶದ ರಸ್ತೆಗಳ ಅಭಿವೃದ್ಧಿ

೧೩೭೩(೧೬೭೨)

ಶ್ರೀ ಬೆಳ್ಳುಬ್ಬಿ ಸಂಗಪ್ಪ ಕಲ್ಲಪ್ಪ (ಬಸವನಬಾಗೇವಾಡಿ): ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಪ್ರತಿ ತಾಲ್ಲೂಕುಗಳಲ್ಲಿ ಎಷ್ಟು ಕೋಟಿ ರೂ.ವೆಚ್ಚದಲ್ಲಿ ಗ್ರಾಮೀಣ ರಸ್ತೆ ಸುಧಾರಣೆ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ಸರ್ಕಾರ ಕ್ರಮ ಕೈಗೊಂಡಿದೆ.

ಆ. ಈ ಕಾರ್ಯ ಯೋಜನೆ ಅಂಗವಾಗಿ ಎಷ್ಟು ಕಿ.ಮೀ. ಗ್ರಾಮೀಣ ರಸ್ತೆಗಳನ್ನು ಮೇಲ್ದರ್ಜೆಗೆ ಏರಿಸಲಾಗುವುದು. (ತಾಲ್ಲೂಕುವಾರು ವಿವರ ನೀಡುವುದು)

ಇ. ರಸ್ತೆರಹಿತ ಎಷ್ಟು ಗ್ರಾಮಗಳು ರಾಜ್ಯದಲ್ಲಿ ಗುರುತಿಸಲ್ಪಟ್ಟಿದೆ. ಈ ವರ್ಷದಲ್ಲಿ ಜಲ್ಲಿ ರಸ್ತೆ ಸಂಪರ್ಕಗಳನ್ನು ಎಷ್ಟಕ್ಕೆ ಕಲ್ಪಿಸಲಾಗಿದೆ? (ವಿವರ ಒದಗಿಸುವುದು)

ಶ್ರೀ ಎಂ.ವೈ.ಘೋರ್ಪಡೆ: (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):

ಅ. ಗ್ರಾಮೀಣ ಸಂಪರ್ಕ ಜಾಲ ಯೋಜನೆಯಡಿಯಲ್ಲಿ ರಸ್ತೆಗಳ ಅಭಿವೃದ್ಧಿಗಾಗಿ ಕಳೆದ ಸಾಲಿನಲ್ಲಿ ಪ್ರತಿ ತಾಲ್ಲೂಕಿಗೆ ೧೦೦ ಲಕ್ಷ ರೂ.ಗಳ ಕಾಮಗಾರಿಗಳನ್ನು ಕೈಗೆತ್ತಿಕೊಂಡು ಮುಗಿಸುವ ಹಂತದಲ್ಲಿದೆ ಹಾಗೂ ಪ್ರತಿ ತಾಲ್ಲೂಕಿಗೆ ಸುಮಾರು ೫೦ ರಿಂದ ೬೦ ಲಕ್ಷ ರೂ.ಗಳ ವೆಚ್ಚದಲ್ಲಿ ಗ್ರಾಮೀಣ ರಸ್ತೆ ಸುಧಾರಣೆಯ ಸಲುವಾಗಿ ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆಯನ್ನು ರೂಪಿಸಿಕೊಂಡಿದ್ದು, ಕರ್ನಾಟಕ ರಾಜ್ಯಕ್ಕೆ ಈ ವರ್ಷ ರೂ.೯೪.೫೨ ಕೋಟಿಗಳನ್ನು ನಿಗದಿಪಡಿಸಲಾಗಿರುತ್ತದೆ. ಭಾರತ ಸರ್ಕಾರದಿಂದ ಅನುಮೋದನೆಯಾಗಿರುತ್ತದೆ.

ಆ.ಗ್ರಾಮೀಣ ಸಂಪರ್ಕ ಜಾಲ ಯೋಜನೆಯಡಿಯಲ್ಲಿ ೩೩೪೦ ಕಿ.ಮೀ. ಮತ್ತು ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆಯಲ್ಲಿ ೨೦೨೫ ಕಿ.ಮೀ. ರಸ್ತೆಯನ್ನು ಡಾಂಬರೀಕರಣ ಮಾಡಲು ಉದ್ದೇಶಿಸಲಾಗಿದೆ. (ಬಿಜಾಪುರ ಜಿಲ್ಲೆಯ ತಾಲ್ಲೂಕುವಾರು ವಿವರ ಕೆಳಕಂಡಂತಿದೆ)

ಕ್ರ. ಸಂ.	ತಾಲ್ಲೂಕು	ಗ್ರಾಮೀಣ ಸಂಪರ್ಕ ಜಾಲ ಯೋಜನೆಯಡಿ ಕಿ.ಮೀಗಳಲ್ಲಿ	ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆ ಕಿ.ಮೀ.ಗಳಲ್ಲಿ
೧.	ಬಿಜಾಪುರ	೩೦.೦೦	೯.೫೦
೨.	ಇಂಡಿ	೨೩.೫೦	೬.೫೦
೩.	ಬಸವನ ಬಾಗೇವಾಡಿ	೨೯.೦೦	೧೧.೦೦
೪.	ಮುದ್ದೇಬಿಹಾಳ	೩೦.೦೦	೧೦.೯೦
೫.	ಸಿಂಧಗಿ	೨೯.೦೦	೮.೦೦

೨. ರಸ್ತೆ ರಹಿತ ೧೦೩ ಗ್ರಾಮಗಳನ್ನು ರಾಜ್ಯದಲ್ಲಿ ಗುರುತಿಸಲ್ಪಟ್ಟಿದೆ. ಈ ಎಲ್ಲ ಗ್ರಾಮಗಳಿಗೆ ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆಯಡಿಯಲ್ಲಿ ಸಂಪರ್ಕ ಕಲ್ಪಿಸಲು ಯೋಜನೆ ಹಾಕಿಕೊಳ್ಳಲಾಗಿದೆ.

ಸೇಡಂ ಕ್ಷೇತ್ರದಲ್ಲಿ ವರ್ಗಗಳಿಗೆ ತಕ್ಕ ಶಾಲಾ ಕೋಣೆಗಳನ್ನು ನಿರ್ಮಿಸುವುದು.

೧೩೭೬(೧೭೪೨)

ಶ್ರೀ ಬಸವಂತ ರೆಡ್ಡಿ ಮೋತಕಪಲ್ಲಿ (ಸೇಡಂ): ಮಾನ್ಯ ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ಗುಲ್ಬರ್ಗ ಜಿಲ್ಲೆಯ ಸೇಡಂ ಕ್ಷೇತ್ರ (ಚಿತ್ತಾಪುರ ತಾ.೧೧ ಹಳ್ಳಿಗಳು ಸೇರಿ)ದಲ್ಲಿ ವರ್ಗಗಳಿಗೆ ತಕ್ಕ ಶಾಲಾ ಕೋಣೆಗಳು ಬಹಳಷ್ಟು ಕಡಿಮೆ ಇದ್ದದ್ದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಆ. ಯಾವ ಯಾವ ಗ್ರಾಮಗಳಲ್ಲಿ ಇರುವ ವರ್ಗಗಳಿಷ್ಟು ಅಲ್ಲಿರುವ ಕೋಣೆಗಳ ಸಂಖ್ಯೆ ಎಷ್ಟು?

ಇ. ಕಡಿಮೆ ಇದ್ದರೆ ಇದರ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮವೇನು; ಕಡಿಮೆ